ಕಂದಾಯ ಅದಾಲತ್‌ನಲ್ಲಿ ಆಗಿರುವ ಪ್ರಕರಣಗಳು

2035 (2393); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂದಾಯ ಅದಾಲತ್‌ನಲ್ಲಿ ಮತ್ತು ಪೋಡಿ ಅದಾಲತ್‌ನಲ್ಲಿ ಆಗಿರುವ ಪ್ರಕರಣಗಳೆಷ್ಟು; ಇನ್ನೂ ಉಳಿದಿರುವ ಪ್ರಕರಣಗಳೆಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ನೆಲಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆದ ಕಂದಾಯ ಅದಾಲತ್ ನಡೆದ ಸಂದರ್ಭದಲ್ಲಿ ಸ್ವೀಕೃತವಾದ ಪ್ರಕರಣಗಳ ವಿವರ. ವಿಲೇಯಾದ ಪ್ರಕರಣಗಳ ವಿವರ ಮತ್ತು ಬಾಕಿ ಇರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿರುತ್ತವೆ ಮತ್ತು ಬಾಕಿ ಇರುವ ಒಟ್ಟು 2333 ಪ್ರಕರಣಗಳನ್ನು (ಸರ್ಕಾರದ ಜಮೀನನ್ನು ಹೊರತುಪಡಿಸಿ) ಸರ್ವೆ ವಿಭಾಗಕ್ಕೆ ಅಳತೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಅದರಂತೆ ವರದಿ ಬಂದ ನಂತರ ಈ ಬಗ್ಗೆ ಕ್ರಮವಹಿಸಲಾಗುವುದು.

ಸ್ವೀಕರಿಸಿದ ಪ್ರಕರಣಗಳ ಒಟ್ಟು ಸಂಖ್ಯೆ	15560
ವಿಲೇಯಾದ ಪ್ರಕರಣಗಳ ಒಟ್ಟು ಸಂಖ್ಯೆ	13227
ಬಾಕಿ ಇರುವ ಪ್ರಕರಣಗಳ ಒಟ್ಟು ಸಂಖ್ಯೆ	2333

ಪೋಡಿ ಅದಾಲತ್ ವಿವರ;

ಪೋಡಿ ಅದಾಲತ್‌ಗೆ ತ್ಯಾಮಗೊಂಡ್ಲು ಹೋಬಳಿಯನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ಸರ್ವೆ ನಂಬರುಗಳು, ಆಯ್ಕೆ ಕಾರ್ಯ ಪೂರ್ಣಗೊಂಡಿರುವ ಸರ್ವೆ ನಂಬರುಗಳು, ಮತ್ತು ಅಳತೆಗೆ ಬಾಕಿ ಇರುವ ಸರ್ವೆ ನಂಬರ್ ಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ಆಯ್ಕೆ ಮಾಡಿರುವ ಒಟ್ಟು ಸರ್ವೆ ನಂಬರ್‌ಗಳು	155
ಅಳತೆ ಕಾರ್ಯ ಪೂರ್ಣಗೊಳಿಸಿರುವ ಸರ್ವೆ ನಂಬರ್‌ಗಳ ಒಟ್ಟು ಸಂಖ್ಯೆ	151
ಅಳತೆಗೆ ಬಾಕಿ ಇರುವ ಸರ್ವೆ ನಂಬರ್‌ಗಳ ಒಟ್ಟು ಸಂಖ್ಯೆ	04

ಅರಣ್ಯ ಭೂಮಿ ಒತ್ತುವರಿ

2036 (2394); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ಕಸಬಾ ಹೋಬಳಿ, ಬೋಳಮಾರನಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಅರಣ್ಯ ಭೂಮಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬೋಳಮಾರನಹಳ್ಳಿ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಜಾಗವೆಷ್ಟು;

ಇ) ಯಾವ ಯಾವ ರೈತರು ಈ ಜಾಗದಲ್ಲಿ ಫಾರಂ 53 ರಡಿಯಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿರುತ್ತಾರೆ ಹಾಗೂ ಪ್ರಸ್ತುತ ಅರ್ಜಿ ಸಲ್ಲಿಸಿದ್ದಾರೆ; (ಅಂತಹ ಪಲಾನುಭವಿ ರೈತರುಗಳ ಹೆಸರು ಮತ್ತು ವಿಳಾಸದ ಸಂಪೂರ್ಣ ಮಾಹಿತಿ ನೀಡುವುದು)